**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.**

**ಪಿ.ಸಿ.09/2024**

| | | | |
|---|---|---|---|
| ಸಾಕ್ಷಿದಾರರ ಹೆಸರು | ಪೂಜಾ ಕಾಯಕದ | ಪಿಡಬ್ಲ್ಯೂ | 1 |
| ಗಂಡನ ಹೆಸರು | ಕರಬಸಪ್ಪ | | |
| ವಯಸ್ಸು | 44 ವರ್ಷ | | |
| ಉದ್ಯೋಗ | ವ್ಯಾಪಾರ | | |
| ವಾಸಸ್ಥಳ | ಹಾವೇರಿ | | |

ದಿಃ**15.09.2025**ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ದಂ.ಪ್ರಕ್ರಿಯಾ ಸಂಹಿತೆ ಕಲಂ.**200** ರಡಿಯಲ್ಲಿ ಪಿರ್ಯಾದಿ ಪರ ಸತ್ಯ ಪ್ರಮಾಣ ಹೇಳಿಕೆಃ

**1)** ನನ್ನ ಸ್ವಂತಕ್ಕೆ ಸೇರಿದ ಸೂಪರ್ ಮಾರ್ಕೇಟ ಹಾವೇರಿಯಲ್ಲಿದ್ದು ಸದರಿ ಸೂಪರ್ ಮಾರ್ಕೇಟ್ ಬಂದ ಆದ ನಂತರ ಹಾವೇರಿಯಲ್ಲಿ ನಾನು ರೇಣುಕಾ ಜನರಲ್ ಸ್ಟೋರ ಎನ್ನುವ ಒಂದು ಅಂಗಡಿಯನ್ನು ಹಾವೇರಿಯಲ್ಲಿ ತೆರೆಯಲು ಭೀಮಣ್ಣ ಶಂಕ್ರಪ್ಪ ಭೀಮಣ್ಣನವರ ಇವರಿಂದ ರೂ.40,00,000/- ಕೈಗಡ ಸಾಲವನ್ನು ತೆಗೆದುಕೊಂಡು ನಾನು ಭದ್ರತೆಗಾಗಿ ನಾನು ಸಹಿ ಮಾಡಿದ 9 ಖಾಲಿ ಚೆಕ್ಕುಗಳನ್ನು ಸದರಿ ಭೀಮಪ್ಪ ಇವರಿಗೆ ಕೊಟ್ಟಿರುತ್ತೇನೆ. ಅದನ್ನು ಹೊರತುಪಡಿಸಿ ಪುನಃ ನನ್ನ ಗಂಡನು ಸಹಿ ಮಾಡಿದ ಎರಡು ಖಾಲಿ ಚೆಕ್ಕುಗಳನ್ನು ಸದರಿ ಶಂಕ್ರಪ್ಪ ಇವರಿಗೆ ಕೊಟ್ಟಿರುತ್ತೇನೆ ಮತ್ತು ನಾನು ಸಹಿ ಮಾಡಿದ ಎರಡು ಖಾಲಿ ಬಾಂಡುಗಳನ್ನು ಭದ್ರತೆಗಾಗಿ ಭೀಮಪ್ಪ ಇವರಿಗೆ ಕೊಟ್ಟಿದ್ದೇನೆ. ನಂತರ ಶಂಕ್ರಪ್ಪ ಇವರು ಒತ್ತಾಯ ಮಾಡಿ ನನ್ನ ದುಡ್ಡನ್ನು ಮರಳಿ ಕೊಡುತ್ತಿಲ್ಲ ಎಂದು ಹಾವೇರಿ ಶಹರ ಪೊಲೀಸ ಠಾಣೆಯಲ್ಲಿ ಕಳುಹಿಸಿ ಕೊಟ್ಟಿರುತ್ತಾರೆ. ನನ್ನ ತವರುಮನೆಯಲ್ಲಿದ್ದ ಜಮೀನನ್ನು ಮಾರಾಟ ಮಾಡಿ ನಾನು ಭೀಮಪ್ಪ ಇವರಿಗೆ ರೂ.35,63,500/- ಗಳನ್ನು ಮರಳಿ ಕೊಟ್ಟಿರುತ್ತೇನೆ.

**2)** ನಂತರ ಭೀಮಪ್ಪ ಇವರಿಗೆ ನಾನು ಮತ್ತು ನನ್ನ ಗಂಡ ಬರೆದುಕೊಟ್ಟಂತಹ ಖಾಲಿ ಚೆಕ್ಕುಗಳನ್ನು ಮತ್ತು ನಾನು ಸಹಿ ಮಾಡಿದಂತಹ ಎರಡು ಖಾಲಿ ಬಾಂಡುಗಳನ್ನು ಸಹ ಮರಳಿಕೊಡಿ ಎಂದು ಕೇಳಿದಾಗ ಸದರಿ ಶಂಕ್ರಪ್ಪ ಇವನು ನನಗೆ ಅವಾಚ್ಯ ಶಬ್ದಗಳಿಂದ ಬೈದು, ನನ್ನನ್ನು ಹಿಡಿದು ಎಳೆದಾಡಿ, ಹೊಡೆದು ನನಗೆ ಮಾನಸಿಕ ಹಾಗೂ ದೈಹಿಕ ಹಿಂಸೆ ಕೊಟ್ಟಿದ್ದಾನೆ. ಸದರಿ ಘಟನೆಯು ದಿನಾಂಕಃ 29.07.2024 ರಂದು ಮಧ್ಯಾಹ್ನ 12-00 ಘಂಟೆಗೆ ನಡೆದಿದ್ದು, ನಂತರ ನಾನು ಪೊಲೀಸ ಠಾಣೆಗೆ ಹೋಗಿ ಶಂಕ್ರಪ್ಪನ ವಿರುದ್ಧ ಪಿರ್ಯಾದಿ ಕೊಡಲು ಹೋದಾಗ ಸದರಿ ಪೊಲೀಸ ಠಾಣೆಯಲ್ಲಿದ್ದ ಠಾಣಾಧಿಕಾರಿಯು ಶಂಕ್ರಪ್ಪನ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದೇ ಇದ್ದಾಗ, ನಂತರ ಹಾವೇರಿಯ ಪೊಲೀಸ ವರಿಷ್ಠಾಧಿಕಾರಿ ಇವರಿಗೂ ಸಹ ಪಿರ್ಯಾದಿಯನ್ನು ಕೊಟ್ಟಿದ್ದೇನೆ. ಸದರಿ ಪೊಲೀಸ ವರಿಷ್ಠಾಧಿಕಾರಿ ಯಾವ ಕ್ರಮ ತೆಗೆದುಕೊಂಡಿರುವದಿಲ್ಲ. ಆದ್ದರಿಂದ ಆರೋಪಿಯಾದಂತಹ ಭೀಮಪ್ಪ ಉರ್ಫ ಭೀಮಣ್ಣ ಇವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಈ ಖಾಸಗಿ ಪಿರ್ಯಾದಿ ಸಲ್ಲಿಸಿದ್ದೇನೆ.

**3)** ನಾನು ಈ ಪಿರ್ಯಾದಿಯಲ್ಲಿ ಹಾವೇರಿಯ ಪೊಲೀಸ ವರಿಷ್ಠಾಧಿಕಾರಿ ಇವರಿಗೆ ಕೊಟ್ಟಂತಹ ಪಿರ್ಯಾದಿಯ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ-1 ಎಂದು ಗುರುತಿಸಲಾಯಿತು. ಅದೇ ರೀತಿ ಆರೋಪಿಯಾದ ಭೀಮಪ್ಪ ಉರ್ಫ ಭೀಮಣ್ಣ ಇವರಿಗೆ ವಕೀಲರ ಮೂಲಕ ಕೊಟ್ಟಂತಹ ನೋಟಿಸಿನ ಕಚೇರಿ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ-2 ಎಂದು ಗುರುತಿಸಲಾಯಿತು. ನಾನು ಕೊಟ್ಟಂತಹ ಖಾಲಿ ಬಾಂಡುಗಳಲ್ಲಿ ಆರೋಪಿಯಾದಂತಹ ಭೀಮಪ್ಪ ಈತನು ಏನು ಬರೆದುಕೊಂಡಿದ್ದಾನೆ ಎಂದು ನನಗೆ ಗೊತ್ತಿಲ್ಲ. ನನಗೆ ಸೇರಿದ ಪ್ಲಾಟ ನಂಬರಃ 7569 ಇದನ್ನು ಆರೋಪಿಯಾದಂತಹ ಭೀಮಪ್ಪ ಈತನು ತನಗೆ ಸೇರಿದಂತಾಗಿರುತ್ತದೆ ಎಂದು ಮತ್ತು ಅದನ್ನು ನಾನು ಆತನಿಗೆ ಹಕ್ಕುಬಿಟ್ಟುಕೊಟ್ಟಿರುವದಾಗಿ ಖೊಟ್ಟಿಯಾಗಿ ಸೃಷ್ಟಿಸಿಕೊಂಡಿದ್ದಾನೆ. ನಾನು ಮತ್ತು ನನ್ನ ಗಂಡ ಸಹಿ ಮಾಡಿ ಕೊಟ್ಟಂತಹ ಖಾಲಿ ಚೆಕ್ಕುಗಳು ಆರೋಪಿ

ಭೀಮಪ್ಪ ಬಳಿ ಇರುತ್ತವೆ. ಆದ್ದರಿಂದ ನಾನು ಈ ನ್ಯಾಯಾಲಯಕ್ಕೆ ಆರೋಪಿ ವಿರುದ್ದ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

<u>ಮರು ವಿಚಾರಣೆ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.